# ನೆಗೆಟಿವ್ ಪಾತ್ರವೇ ಒಂಥರಾ ಕಿಕ್

ರಾಮ್ ಪವನ್
ಉದಯದ
'ಶಾಂಭವಿ'ಯ ಆದಿ



**◆ ಆದಿ ಪಾತ್ರದ ಬಗ್ಗೆ ನಿಮ್ಮ ನಿಲುವೇನು?**

ಅಘೋರಿಯಾಗಿದ್ದೇನೆ. ಲಾಭಕ್ಕಾಗಿ ಕುಟುಂಬದೊಳಗೆ ಏನೆಲ್ಲ ಮಾಡಲು ಸಿದ್ಧ. ಶ್ರಮವಹಿಸಿ ಮಂತ್ರಗಳನ್ನು ಕಲಿಯುವುದು. ಎಲ್ಲರನ್ನೂ ಪಳಗಿಸುವ ಶಕ್ತಿ ಗಳಿಸುವುದು ಅಸಾಮಾನ್ಯ ವ್ಯಕ್ತಿತ್ವವೇ ಸರಿ. ನನ್ನ ಸಾಮರ್ಥ್ಯದಿಂದ ಶಾಂಭವಿಯನ್ನೂ ನಿಯಂತ್ರಿಸಬೇಕು. ಪಾತ್ರ ಶಕ್ತಿಶಾಲಿಯಾಗಿದೆ. ವೀಕ್ಷಕರನ್ನು ಹಿಡಿದಿಟ್ಟುಕೊಳ್ಳುವ ಶಕ್ತಿಯೂ ಇದೆ.

**◆ ನಿಮ್ಮನ್ನು ನೋಡಿದರೆ ಜನ ಹೆದರಲ್ವಾ?**

ಕೆಲವರು 'ಏನು ಹಾಗೆ ಭಯಾನಕವಾಗಿ ಮಾಡುತ್ತೀಯಾ' ಎಂದು ಪ್ರಶ್ನಿಸುತ್ತಾರೆ. ನನ್ನ ಆವೇಷ ಪಾತ್ರದ ಬಗ್ಗೆ ಅನೇಕರು ಹೆದರಿದ್ದೂ ಇದೆ. ಚಿತ್ರೀಕರಣದ ಸ್ಥಳಕ್ಕೆ ಮಕ್ಕಳೇನಾದರೂ ಬಂದರೆ ನನ್ನನ್ನು ನೋಡಲು ಅಂಜಿಕೆ ವ್ಯಕ್ತಪಡಿಸುತ್ತಾರೆ. ದೂರದಲ್ಲೇ ನಿಂತು ಮಾತನಾಡುತ್ತಾರೆ. ಆ ಗೆಟಪ್ ಹಾಗಿರುತ್ತದೆ. ರುದ್ರಾಕ್ಷಿಮಣಿಗಳ ಹಾರ, ತಿಲಕ, ತೀಕ್ಷ್ಣ ನೋಟ ಅಬ್ಬಬ್ಬಾ ಎನ್ನುತ್ತಾರೆ. ಆದರೆ ತೆರೆಯಲ್ಲಿ ನೋಡಿ ಅನೇಕರು ಮೆಚ್ಚುಗೆಯನ್ನು ಸೂಚಿಸಿದ್ದಾರೆ.

**◆ 'ಹಿಟ್ಲರ್ ಕಲ್ಯಾಣ'ದ ನಂತರ ಕಿರುತೆರೆಯಿಂದ ದೂರ ಇದ್ದಿದ್ದು ಏಕೆ?**

ನಂದೀಶ್ ನಿರ್ದೇಶನದ 'ರುದ್ರ ಗರುಡ ಪುರಾಣ' ಸಿನಿಮಾದಲ್ಲಿ ಪ್ರಮುಖ ಪಾತ್ರ ಸಿಕ್ಕಿತ್ತು. ಅದರಲ್ಲಿ ರಿಷಿ ನಾಯಕ ನಟ. ಸಾಮಾನ್ಯವಾಗಿ ಯಾವುದೇ ಅವಕಾಶವನ್ನು ಶೋಧ ಮಾಡಿದ ನಂತರವೇ ಒಪ್ಪುವುದು ನನ್ನ ಸ್ವಭಾವ. ಇದು ನನ್ನ ಒಂಬತ್ತನೆಯ ಧಾರಾವಾಹಿ. ಇಲ್ಲಿಯ ತನಕ ವಿಲನ್ ಪಾತ್ರಗಳೇ ನನ್ನನ್ನು ಹುಡುಕಿಕೊಂಡು ಬರುತ್ತವೆ. ಹಾಗೆಂದು ಸುಮ್ಮನೆ ಒಪ್ಪುವುದಿಲ್ಲ. ನೆಗೆಟಿವ್ ಅಂದರೆ ಸಿಕ್ಕಾಪಟ್ಟೆ ನೆಗೆಟಿವ್ ಆಗಿರಬೇಕು. ನನ್ನ ಪಾತ್ರ ಬಿಟ್ಟು ಬೇರೆಯದಕ್ಕೆ ಅವಕಾಶ ಇರಕೂಡದು. ಅಂತಹ ನೆಗೆಟಿವ್ ಗುಣವನ್ನೇ ಇಷ್ಟಪಡುತ್ತೇನೆ. 'ಹಿಟ್ಲರ್ ಕಲ್ಯಾಣ'ದ ನಂತರ ಸಿನಿಮಾದಲ್ಲಿ ತೊಡಗಿದ್ದೆ. ಅವಕಾಶಗಳು ಬಂದರೂ ಕಥೆ ಇಲ್ಲವೇ ಪಾತ್ರ ಇಷ್ಟ ಆಗಲಿಲ್ಲ ಎಂದು ಒಪ್ಪಿರಲಿಲ್ಲ.

**◆ ನೆಗೆಟಿವ್ ಪಾತ್ರಗಳ ಮೇಲೆ ಏಕೆ ನಿಮ್ಮ ಒಲವು?**

ಕಲರ್ಸ್‌ನಲ್ಲಿ 'ಮನೆದೇವ್ರು' ನನ್ನ ಮೊದಲ ಧಾರಾವಾಹಿ. ಅದರಲ್ಲಿ ಹೇಗೋ ವಿಲನ್ ಪಾತ್ರ ಮಾಡಿದೆ. ಅದು ವೀಕ್ಷಕರನ್ನು ಸೆಳೆಯಿತು. ನನ್ನ ಪಾತ್ರಕ್ಕೆ ಒಳ್ಳೆಯ ಮೆಚ್ಚುಗೆಯೂ ಸಿಕ್ಕಿತು. ಅದರ ಪರಿಣಾಮ ಕಿರುತೆರೆ ಜಗತ್ತಿನಲ್ಲಿ ಗುರುತಿಸಿಕೊಳ್ಳಲು ಸಾಧ್ಯ ಆಯಿತು. 'ಅನುಬಂಧ' ಕಾರ್ಯಕ್ರಮದಲ್ಲಿ ಆ ಪಾತ್ರಕ್ಕೆ ಅವಾರ್ಡ್ ಕೂಡ ಸಿಕ್ಕಿತು. ಅದರ ಪ್ರಭಾವದಿಂದ ಪಾಸಿಟಿವ್ ಪಾತ್ರ ಅಂದರೆ ಹಿಂದೇಟು ಹಾಕುವಂತೆ ಆಯಿತು. ನೆಗೆಟಿವ್ ಪಾತ್ರ ಅಂದರೆ ಖುಷಿಯಿಂದ ಅಭಿನಯಿಸುತ್ತೇನೆ. ಪಾತ್ರವನ್ನು ಸಂಪೂರ್ಣ ಆವರಿಸಿಬಿಡುತ್ತೇನೆ. ಪಾತ್ರ ಯಾವುದಾದರೂ ಮನಪೂರ್ವಕವಾಗಿ ಮಾಡಬೇಕು ಎಂದು ಅನ್ನಿಸುತ್ತದೆ. ವಿಲನ್ ಪಾತ್ರಕ್ಕೆ ಎಲ್ಲಿಂದ ಶಕ್ತಿ ಬರುತ್ತೋ ಗೊತ್ತಿಲ್ಲ.

**◆ ಬಣ್ಣದ ಪ್ರೀತಿ ಹುಟ್ಟಿದ್ದು ಹೇಗೆ? ಇಲ್ಲದಿದ್ದರೆ ಏನು ಮಾಡ್ತಿದ್ರಿ?**

ನಮ್ಮ ಕುಲಕಸುಬು ಚಿನ್ನ–ಬೆಳ್ಳಿ ಆಭರಣ ಮಾಡುವುದು. ನನ್ನ ಕೆಲಸವೂ ಅದೇ ಆಗಿರುತ್ತಿತ್ತು. ಯಾವುದಾದರೂ ಪಟ್ಟಣದಲ್ಲಿ ಚಿನ್ನದ ಅಂಗಡಿ ಇಟ್ಟುಕೊಂಡಿರುತ್ತಿದ್ದೆ ಅಂತ ಅನ್ನಿಸುತ್ತದೆ. ಮೂಲತಃ ಕುಮಟದ ನಾವು, ಹಾವೇರಿ ಜಿಲ್ಲೆಯ ಅಕ್ಕಿಆಲೂರಿನಲ್ಲಿ ನೆಲೆಸಿದ್ದೇವೆ. ತಂದೆಯ ಉದ್ಯಮದ ನಿಮಿತ್ತ ದಾವಣಗೆರೆಗೆ ಬಂದೆವು. ಸಹೋದರರು ಅಪ್ಪ ಅದೇ ಉದ್ಯಮದಲ್ಲಿ ಇದ್ದಾರೆ. ನನ್ನ ಅಕ್ಕನ ಮದುವೆ ಆಯಿತು. ಅವರು ಶಿವಮೊಗ್ಗದಲ್ಲಿ ನೆಲೆಸಿದ್ದಾರೆ. ಆ ಕಾರಣಕ್ಕೆ ನಾವೂ ಅಲ್ಲಿಗೆ ಬರಬೇಕಾಯಿತು. ಅದು 2008ರ ಆಸುಪಾಸು, ಅದೇ ಸಮಯದಲ್ಲಿ ಸುವರ್ಣದ 'ಪ್ರೀತಿಯಿಂದ' ಧಾರಾವಾಹಿ ಚಿತ್ರೀಕರಣ ನಡೀತಾ ಇತ್ತು. ಅದರಲ್ಲಿ ನನ್ನ ಪರಿಚಿತರೂ ಅಭಿನಯಿಸುತ್ತಿದ್ದರು. ನಾನಾಗ ತುಂಬ ಸ್ಟೈಲ್ ಮಾಡುತ್ತಿದ್ದೆ. ನೋಡಲು ಹೋಗಿದ್ದ ನನಗೆ ಸಣ್ಣ ಪಾತ್ರ ಮಾಡುವ ಯೋಗ ಬಂತು. ಅದನ್ನು ನೋಡಿ ಮನೆಯಲ್ಲಿ ಬೆಂಬಲಿಸಿದರು. ನಮ್ಮ ಕುಲಕುಸುಬು ಯಾವತ್ತಾದರೂ ಮಾಡಬಹುದು ಎಂದು ಹೊಸತು ಅನ್ನಿಸಿದ್ದರಿಂದ ಅಭಿನಯದ ಬೆನ್ನಿಗೆ ಬಿದ್ದೆ.

**◆ ಅಭಿನಯ ಕಲಿಯದಿದ್ದರೂ ಮಾಡುವ ಧೈರ್ಯ ಹೇಗೆ ಬಂತು?**

ಅದೇ ಆತ್ಮವಿಶ್ವಾಸ. ಚಿತ್ರೀಕರಣ ಸ್ಥಳಕ್ಕೆ ಹೋಗಿ ಫೋಟೊ ಕೊಡುವುದು, ಆಡಿಷನ್ ಕೊಡುವುದು ನಿರಂತರ ಕಾಯಕ ಆಯಿತು. ನಾಟಕವನ್ನೂ ಮಾಡಿದ ಅನುಭವ ನನಗೆ ಇರಲಿಲ್ಲ. ಹಾಗಾಗಿ ಆರಂಭದಲ್ಲಿ ಕಷ್ಟ ಆಯಿತು. ಅದರ ನಡುವೆ 'ಮಿಸ್ಟರ್ ಅಂಡ್ ಮಿಸಸ್ ರಾಮಾಚಾರಿ', 'ಲೋಕಲ್ ಟ್ರೈನ್' ಸಿನಿಮಾಗಳಲ್ಲಿ ಪುಟ್ಟ ಪುಟ್ಟ ಪಾತ್ರ ಮಾಡಿದೆ. ಕಲರ್ಸ್‌ಗೆ ಆಡಿಷನ್ ಕೊಟ್ಟಿದ್ದೆ. ನಿರ್ದೇಶಕ ತ್ರಿಶೂಲ್ ಸ್ವಲ್ಪ ತರಬೇತಿ ನೀಡಿ ಅವಕಾಶ ನೀಡಿದರು. ಅಲ್ಲಿಂದ ಹಿಂದೆ ನೋಡಿದ್ದೇ ಇಲ್ಲ. ನಾಯಕನಿಗಿಂತ ನೆಗೆಟಿವ್ ಪಾತ್ರವೇ ಇಷ್ಟ. ಕಥೆಗೆ ಅದೇ ಪ್ರಮುಖವಾಗುತ್ತದೆ.

■ ರಾಘವೇಂದ್ರ ಕೆ.